





**ಭೀಮ:** ರಾಮು ಮೊದಲ ದಿನದ ಟ್ರಾಫಿಕ್ ಪೊಲೀಸ್ ಕೆಲಸ ಹೇಗಿತ್ತು?
**ರಾಮು:** ರ‍್ಯಾಶ್ ಡ್ರೈವ್ ಅಂತ ಫೈನ್ ಹಾಕಿದ್ದಕ್ಕೆ ನನ್ನ ಸಸ್ಪೆಂಡ್ ಮಾಡಿದ್ರು.
**ಭೀಮ:** ಫೈನ್ ಹಾಕಿದ್ದು ಸರಿಯಾಗೇ ಇತ್ತಲ್ಲ. ನಿನ್ನನ್ನು ಏಕೆ ಸಸ್ಪೆಂಡ್ ಮಾಡಿದ್ರು?
**ರಾಮು:** ನಾನು ಫೈನ್ ಹಾಕಿದ್ದು ರೋಗಿಯನ್ನು ತುರ್ತಾಗಿ ಸಾಗಿಸುತ್ತಿದ್ದ ಆಂಬುಲೆನ್ಸ್‌ಗೆ. ಅವರಿಗೆ ಫೈನ್ ಹಾಕಬಾರದೆಂದು ನನಗೆ ಗೊತ್ತಾಗಿದ್ದೇ ನಾನು ಸಸ್ಪೆಂಡ್ ಆದ ಮೇಲೆ.

**ಮಾಲೀಕ:** ನೀನು ಈ ಕಾರ್ಖಾನೆಯಲ್ಲಿ ಎಷ್ಟು ವರ್ಷ ಕೆಲಸ ಮಾಡಿದೆ?
**ನೌಕರ:** ಐವತ್ತು ವರ್ಷ.
**ಮಾಲೀಕ:** ನಿನ್ನ ವಯಸ್ಸು?
**ನೌಕರ:** ಮೂವತ್ತು ವರ್ಷ.
**ಮಾಲೀಕ:** ನಿನ್ನ ವಯಸ್ಸೇ ಮೂವತ್ತಿರುವಾಗ ಐವತ್ತು ವರ್ಷ ಕೆಲಸ ಮಾಡಲು ಹೇಗೆ ಸಾಧ್ಯ?
**ನೌಕರ:** ಇಲ್ಲಿ ಕೆಲಸಕ್ಕಿಂತ ಓವರ್ ಟೈಮ್ ಡ್ಯೂಟಿನೇ ಜಾಸ್ತಿ.

**ರೋಗಿಯ ಕಡೆಯವರು:** ಆಪರೇಷನ್ ಮುಗೀತಾ ಡಾಕ್ಟರ್? ಈಗ ರೋಗಿ ಹೇಗಿದ್ದಾರೆ?
**ಡಾಕ್ಟರ್:** ಅಯ್ಯೋ ಅವರಿಗೆ ಆಪರೇಷನ್ ಮಾಡಬೇಕಿತ್ತಾ? ನಾನು ಪೋಸ್ಟ್ ಮಾರ್ಟಂ ಅಂದುಕೊಂಡು ಮಾಡಿಬಿಟ್ಟೆನಲ್ಲ!

ಇಂಗ್ಲಿಷ್‌ನಲ್ಲಿ ಮಾತಾಡಿ ಅಭ್ಯಾಸವಿದ್ದ ಡಾಕ್ಟರ್ ಗ್ರಾಮೀಣ ಮಹಿಳೆಯೊಬ್ಬರನ್ನು ಹೀಗೆ ಕೇಳಿದರು.
**ಡಾಕ್ಟರ್:** ಏನಮ್ಮಾ, ಮಗುವಿಗೆ ಬ್ರೆಸ್ಟ್ ಮಿಲ್ಕ್ ಕೊಡ್ತಾ ಇದ್ದೀಯಾ ತಾನೆ?
**ಪಕ್ಕದಲ್ಲೇ ಇದ್ದ ಗಂಡ:** ಸ್ವಾಮಿ ನಾವು ಬಡವರು. ಅದು ಇದು ಕೊಂಡು ತರೋಕೆ ಆಗೋಲ್ಲ, ಇವಳೇ ಹಾಲು ಕುಡಿಸುತ್ತಾ ಇದ್ದಾಳೆ ಅಷ್ಟೇ.

ಡಾಕ್ಟರ್ ಹೇಗಿದ್ದೀರಿ ಅಂತ ರೋಗಿನ ಕೇಳಿದ್ರು.
**ರೋಗಿ:** ಹಾಗೇ ಇದ್ದೀನಿ ಡಾಕ್ಟರ್! ಉಸಿರಾಟವೇ ಕಷ್ಟವಾಗಿಬಿಟ್ಟಿದೆ.
**ಡಾಕ್ಟರ್:** ಯೋಚನೆ ಮಾಡಬೇಡಿ. ಅದನ್ನು ನಿಲ್ಲಿಸೋಕೆ ಏನಾದರೂ ಕೊಡ್ತೀನಿ.




ಪೋಸ್ಟ್‌ಮನ್ ಅಪ್ಪ ಹಾಗೂ ಮಗಳ ಸಂಭಾಷಣೆ.
**ಮಗಳು:** ಅಮ್ಮನಿಗೆ ಸಿಸೇರಿಯನ್ ಆಪರೇಷನ್ ಆಯಿತು ಅನ್ನುತಾರಲ್ಲಪ್ಪಾ, ಹಾಗೆಂದರೇನು?
**ಅಪ್ಪ:** ಅದು ಆರ್ಡಿನರಿ ಪೋಸ್ಟ್‌ನಲ್ಲಿ ಬರುತಲ್ಲ ಆ ಪತ್ರಗಳಂತೆ ಅಲ್ಲ ಮಗು, ಅದು ಸ್ಪೀಡ್ ಪೋಸ್ಟ್‌ನಂತಿರುತ್ತದೆ.

**ಜಾನಿ:** ನಿನ್ನ ಗರ್ಲ್ ಫ್ರೆಂಡ್ ವಿಶೇಷ ಏನು?
**ಮೋನಿ:** ಯಾವಾಗಲೂ ಖರ್ಚು ಮಾಡಿಸ್ತಾಳೆ.
**ಜಾನಿ:** ಹುಡುಗಿಯರು ಮಾಡೋದು ಅದನ್ನೇ. ಅದರಲ್ಲಿ ಹೊಸದೇನು.
**ಮೋನಿ:** ನನ್ನ ಬಳಿ ಅಲ್ಲ ಅವಳ ಅಪ್ಪನ ಬಳಿ ನನಗಾಗಿ ಖರ್ಚು ಮಾಡಿಸುತ್ತಾಳೆ. ಅದಕ್ಕಿಂತ ವಿಶೇಷ ಬೇಕಾ?

ಡಾಕ್ಟರ್ ಒಬ್ಬರು ಬಂದು ಆಪರೇಷನ್ ಕೇಸನ್ನು ಪರೀಕ್ಷೆ ಮಾಡುತ್ತಾ ಹೀಗಂದರು.
**ಡಾಕ್ಟರ್:** ಸಿಸ್ಟರ್ ಥಿಯೇಟರ್‌ಗೆ ರೆಡಿಯಾಗಿ ಬೇಗ.
ಸ್ವಲ್ಪ ಹೊತ್ತಿನ ನಂತರ ಆ ನರ್ಸ್ ಅಲಂಕಾರ ಮಾಡಿಕೊಂಡು ಬಂದು ಡಾಕ್ಟರ್ ಮುಂದೆ ಹೀಗೆ ನುಲಿದಳು.
**ನರ್ಸ್:** ರೆಡಿ ಸರ್! ಯಾವ ಸಿನಿಮಾಗೆ ಹೋಗೋಣ?

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು